Re. · No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| **सं–1** | **नई दिल्ली, सोमवार, मे 5 -1997** | **वैशाख 15, 1919 (शक)** | **खण्ड–16** |
| No. 1 | New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ | ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |


## Ministry of Law, Justice & Company Affairs

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869— ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# THE WEEKLY HOLIDAY ACT, 1942
## (18F 1942)
## ವಾರದ ರಜಾ ದಿನ ಅಧಿನಿಯಮ, 1942
## (1942ರ 18)

[ಏಪ್ರಿಲ್ 3, 1942]

ಅಂಗಡಿಗಳಲ್ಲಿ, ಉಪಾಹಾರ ಮಂದಿರಗಳಲ್ಲಿ ಮತ್ತು ರಂಗಮಂಟಪಗಳಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ವಾರದ ರಜಾ ದಿನಗಳನ್ನು ಕೊಡುವುದಕ್ಕಾಗಿ ಉಪಬಂಧಿಸುವ ಅಧಿನಿಯಮ:

ಅಂಗಡಿಗಳಲ್ಲಿ, ಉಪಾಹಾರ ಮಂದಿರಗಳಲ್ಲಿ ಮತ್ತು ರಂಗಮಂದಿರಗಳಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ವಾರದ ರಜಾ ದಿನಗಳನ್ನು ಕೊಡುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಅದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವಾರದ ರಜಾ ದಿನ ಅಧಿನಿಯಮ, 1942 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಯಾವುದೇ ರಾಜ್ಯದಲ್ಲಿ ಅಥವಾ ಆ ರಾಜ್ಯದೊಳಗೆ ನಿರ್ದಿಷ್ಟಪಡಿಸಲಾದ ಪ್ರದೇಶದಲ್ಲಿ ಜಾರಿಗೆ ಬರತಕ್ಕದ್ದೆಂದು ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿರ್ದೇಶಿಸಿದರೆ ಮಾತ್ರ ಹಾಗೆ ಜಾರಿಗೆ ಬರತಕ್ಕದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾಗಿ ಏನಾದರೂ ಇದ್ದ ಹೊರತು,–

(ಎ) "ಕಾರ್ಯಸಂಸ್ಥೆ" ಎಂದರೆ ಅಂಗಡಿ, ಉಪಹಾರ ಮಂದಿರ ಅಥವಾ ರಂಗಮಂಟಪ;

(ಬಿ) "ದಿನ" ಎಂದರೆ ಮಧ್ಯರಾತ್ರಿಯಿಂದ ಪ್ರಾರಂಭವಾಗುವ ಇಪ್ಪತ್ನಾಲ್ಕು ಗಂಟೆಗಳ ಅವಧಿ;

(ಸಿ) "ಉಪಹಾರ ಮಂದಿರ" ಎಂದರೆ ಯಾವ ಆವರಣದಲ್ಲಿ ಸಾರ್ವಜನಿಕರಿಗೆ ಅಥವಾ ಸಾರ್ವಜನಿಕರ ಒಂದು ವರ್ಗಕ್ಕೆ ಆ ಆವರಣದಲ್ಲಿಯೇ ಸೇವಿಸುವುದಕ್ಕಾಗಿ ಊಟವನ್ನು ಅಥವಾ ಉಪಹಾರವನ್ನು ಸರಬರಾಜು ಮಾಡುವ ವ್ಯವಹಾರವನ್ನು ಪ್ರಧಾನವಾಗಿ ಅಥವಾ ಪೂರ್ಣವಾಗಿ ನಡೆಸಲಾಗುತ್ತಿದೆಯೋ ಆ ಯಾವುದೇ ಆವರಣ, ಆದರೆ ಇದು ರಂಗಮಂಟಪಕ್ಕೆ ಸೇರಿರುವ ಉಪಹಾರ ಮಂದಿರವನ್ನು ಒಳಗೊಳ್ಳುವುದಿಲ್ಲ;

(ಡಿ) "ಅಂಗಡಿ" ಎಂಬುದು ಯಾವ ಆವರಣದಲ್ಲಿ ಕ್ಷೌರಿಕನ ಅಥವಾ ಕೇಶಾಲಂಕಾರಿಯ ವ್ಯವಹಾರವನ್ನೊಳಗೊಂಡು ಯಾವುದೇ ಚಿಲ್ಲರೆ ವ್ಯವಹಾರವನ್ನು ಅಥವಾ ವ್ಯಾಪಾರವನ್ನು ಮತ್ತು ಹರಾಜಿನ ಮೂಲಕದ ಚಿಲ್ಲರೆ ವ್ಯವಹಾರವನ್ನು ನಡೆಸಲಾಗುತ್ತಿದೆಯೋ ಆ ಯಾವುದೇ ಆವರಣವನ್ನು ಒಳಗೊಳ್ಳುತ್ತದೆ: ಆದರೆ ರಂಗಮಂಟಪಗಳಲ್ಲಿ ಕಾರ್ಯಕ್ರಮ ಪಟ್ಟಿಗಳ, ಕ್ಯಾಟಲಾಗುಗಳ ಮಾರಾಟವನ್ನು ಮತ್ತು ಅದೇ ತರಹದ ಇತರ ಮಾರಾಟಗಳನ್ನು ಒಳಗೊಳ್ಳುವುದಿಲ್ಲ;

(ಇ) "ರಂಗಮಂಟಪ" ಎಂಬುದು ಯಾವ ಆವರಣದಲ್ಲಿ ಚಲನಚಿತ್ರಗಳನ್ನು, ನಾಟಕ ಪ್ರಯೋಗಗಳನ್ನು ಅಥವಾ ರಂಗಭೂಮಿ ಮನೋರಂಜನೆಯನ್ನು ಪ್ರಧಾನವಾಗಿ ಅಥವಾ ಪೂರ್ಣವಾಗಿ ಪ್ರಸ್ತುತ ಪಡಿಸಲು ಉದ್ದೇಶಿಸಲಾಗಿದೆಯೋ ಆ ಯಾವುದೇ ಆವರಣವನ್ನು ಒಳಗೊಳ್ಳುತ್ತದೆ;

(ಎಫ್) "ವಾರ" ಎಂದರೆ ಶನಿವಾರದ ಮಧ್ಯರಾತ್ರಿಯಿಂದ ಪ್ರಾರಂಭವಾಗುವ ಏಳು ದಿನಗಳ ಅವಧಿ.

**3. ಅಂಗಡಿಗಳನ್ನು ಮುಚ್ಚುವುದು.-** (1) ಪ್ರತಿಯೊಂದು ಅಂಗಡಿಯನ್ನು ವಾರದ ಒಂದು ದಿನದಂದು ಸಂಪೂರ್ಣವಾಗಿ ಮುಚ್ಚತಕ್ಕದು ಮತ್ತು ಆ ದಿನವನ್ನು ಅಂಗಡಿಯಲ್ಲಿ ಎದ್ದುಕಾಣುವ ಒಂದು ಸ್ಥಳದಲ್ಲಿ ಖಾಯಂ ಆಗಿ ಪ್ರದರ್ಶಿತವಾಗಿರುವ ನೋಟೀಸಿನಲ್ಲಿ ಅಂಗಡಿಯ ಮಾಲೀಕನು ನಿರ್ದಿಷ್ಟಪಡಿಸತಕ್ಕದು.

(2) ಹಾಗೆ ನಿರ್ದಿಷ್ಟಪಡಿಸಲಾದ ದಿನವನ್ನು ಮೂರು ತಿಂಗಳಿಗೆ ಒಂದು ಬಾರಿಗಿಂತ ಹೆಚ್ಚಾಗಿ ಅಂಗಡಿಯ ಮಾಲೀಕನು ಬದಲಾಯಿಸತಕ್ಕದ್ದಲ್ಲ.

**4. ಅಂಗಡಿಗಳಲ್ಲಿ, ಉಪಹಾರ ಮಂದಿರಗಳಲ್ಲಿ ಮತ್ತು ರಂಗಮಂಟಪಗಳಲ್ಲಿ ವಾರದ ರಜಾ ದಿನಗಳು.–** ಯಾವುದೇ ಅಂಗಡಿಯಲ್ಲಿ, ಉಪಹಾರ ಮಂದಿರದಲ್ಲಿ ಅಥವಾ ರಂಗಮಂಟಪದಲ್ಲಿ ಗೋಪ್ಯನಾತೆಯಿಂದ ಅಥವಾ ವ್ಯವಸ್ಥಾಪನಾ ಸ್ಥಾನದಲ್ಲಿ ನಿಯೋಜಿತರಾದವರನ್ನು ಹೊರತುಪಡಿಸಿ ಅನ್ಯಥಾ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಗೆ ಪ್ರತಿಯೊಂದು ವಾರದಲ್ಲೂ ಒಂದು ಪೂರ್ಣ ದಿನದ ರಜೆಯನ್ನು ಪಡೆಯಲು ಅವಕಾಶ ಕೊಡತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಯಾವ ವ್ಯಕ್ತಿಯ ಅಧಿಕೃತ ರಜೆಯ ಮೇಲೆ ಕಳೆದ ಯಾವುವೇ ದಿನಗಳನ್ನು ಒಳಗೊಂಡು ವಾರದಲ್ಲಿ ಕೆಲಸದಲ್ಲಿದ್ದ ಒಟ್ಟು ಅವಧಿಯು ಆರು ದಿನಗಳಿಗಿಂತ ಕಡಿಮೆ ಇದೆಯೋ ಆ ಯಾರೇ ವ್ಯಕ್ತಿಗೆ ಅನ್ವಯಿಸತಕ್ಕದ್ದಲ್ಲ ಅಥವಾ ಅಂಗಡಿಯಲ್ಲಿ ನಿಯೋಜಿತನಾದ ಯಾವ ವ್ಯಕ್ತಿಗೆ 3ನೇ ಪ್ರಕರಣಕ್ಕನುಸಾರವಾಗಿ ಅಂಗಡಿಯನ್ನು ಮುಚ್ಚಿದ ದಿನದಂದು ಪೂರ್ಣ ರಜೆಯನ್ನು ಪಡೆಯಲು ಅವಕಾಶ ಕೊಡಲಾಗಿದೆಯೋ ಆ ವ್ಯಕ್ತಿಯನ್ನು ಹೆಚ್ಚಿನ ರಜೆಯನ್ನು ಪಡೆಯಲು ಹಕ್ಕುಳ್ಳವನನ್ನಾಗಿ ಮಾಡತಕ್ಕದ್ದಲ್ಲ.

**5. ಅಂಗಡಿಯನ್ನು ಅರ್ಧ ದಿನ ಹೆಚ್ಚಾಗಿ ಮುಚ್ಚುವುದು ಅಥವಾ ಹೆಚ್ಚಿನ ಅರ್ಧ ದಿನ ರಜೆ.–** (1) ಅಂಗಡಿಗಳಿಗೆ ಅಥವಾ ಅಂಗಡಿಗಳ ಯಾವುದೇ ನಿರ್ದಿಷ್ಟ ವರ್ಗಕ್ಕೆ ಸಂಬಂಧಿಸಿ, 3ನೇ ಪ್ರಕರಣದ ಮೂಲಕ ಉಪಬಂಧಿಸಲಾದ ದಿನದ ಜೊತೆಗೆ ಪ್ರತಿಯೊಂದು ವಾರದಲ್ಲಿ ಒಂದು ವಾರದ ದಿನದ ಅಪರಾಹ್ನದಲ್ಲಿ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ವೇಳೆಯಲ್ಲಿ ಅವುಗಳನ್ನು ಮುಚ್ಚತಕ್ಕದೆಂದು, ಮತ್ತು ರಂಗಮಂಟಪಗಳಿಗೆ ಹಾಗೂ ಉಪಾಹಾರ ಮಂದಿರಗಳಿಗೆ ಅಥವಾ ಇವೆರಡರಲ್ಲಿ ಯಾವುದಾದಕ್ಕಾದರೂ

ಅಥವಾ ಇವೆರಡರ ಯಾವುದೇ ನಿರ್ದಿಷ್ಟ ವರ್ಗಕ್ಕೆ ಸಂಬಂಧಿಸಿ ಗೋಪ್ಯನಾತೆಯಿಂದ ಅಥವಾ ವ್ಯವಸ್ಥಾಪನಾ ಸ್ಥಾನದಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳನ್ನು ಹೊರತುಪಡಿಸಿ ಅನ್ಯಥಾ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಗೆ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಅಪರಾಹ್ನದ ವೇಳೆಯಲ್ಲಿ ಪ್ರಾರಂಭವಾಗುವ ಒಂದು ಅರ್ಧ ದಿನದ ಹೆಚ್ಚಿನ ರಜೆಯನ್ನು ಪ್ರತಿವಾರದಲ್ಲಿ ಪಡೆದುಕೊಳ್ಳಲು ಅವಕಾಶ ಕೊಡತಕ್ಕದ್ದೆಂದು, ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಅಗತ್ಯಪಡಿಸಬಹುದು.

(2) ರಾಜ್ಯ ಸರ್ಕಾರವು ಈ ಪ್ರಕರಣದ ಉದ್ದೇಶಗಳಿಗಾಗಿ ಬೇರೆ ಬೇರೆ ಅಂಗಡಿಗಳಿಗೆ ಅಥವಾ ಅಂಗಡಿಗಳ ಬೇರೆ ಬೇರೆ ವರ್ಗಗಳಿಗೆ ಅಥವಾ ಬೇರೆ ಬೇರೆ ಪ್ರದೇಶಗಳಿಗೆ ಅಥವಾ ವರ್ಷದ ಬೇರೆ ಬೇರೆ ಕಾಲಗಳಿಗೆ ಬೇರೆ ಬೇರೆ ವೇಳೆಯನ್ನು ಗೊತ್ತುಪಡಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗಿನ ಅಗತ್ಯತೆಗನುಸಾರವಾಗಿ ಅಂಗಡಿಯನ್ನು ಮುಚ್ಚಿದ ವಾರದ ರಜಾ ದಿನವನ್ನು ಅಂಗಡಿಯಲ್ಲಿ ಎದ್ದು ಕಾಣುವ ಒಂದು ಸ್ಥಳದಲ್ಲಿ ಖಾಯಂ ಆಗಿ ಪ್ರದರ್ಶಿತವಾಗಿರುವ ನೋಟಿಸಿನಲ್ಲಿ ಅಂಗಡಿಯ ಮಾಲೀಕನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಮೂರು ತಿಂಗಳಿಗೆ ಒಂದು ಬಾರಿಗಿಂತ ಹೆಚ್ಚಾಗಿ ಅದನ್ನು ಅಂಗಡಿಯ ಮಾಲೀಕನು ಬದಲಾಯಿಸತಕ್ಕದ್ದಲ್ಲ.

**6. ಮಜೂರಿಯಲ್ಲಿ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ ಅಥವಾ ಅದನ್ನು ರದ್ದುಗೊಳಿಸತಕ್ಕದ್ದಲ್ಲ.–** ಈ ಅಧಿನಿಯಮವು ಅನ್ವಯಿಸುವ ಯಾವುದೇ ಕಾರ್ಯ ಸಂಸ್ಥೆಯಲ್ಲಿ ನಿಯೋಜಿತನಾದ ಯಾವನೇ ವ್ಯಕ್ತಿಯ ಮಜೂರಿಯಲ್ಲಿ 3, 4 ಮತ್ತು 5ನೇ ಪ್ರಕರಣಗಳಿಗನುಸಾರವಾಗಿ ಯಾವ ದಿನದಂದು ಅಥವಾ ದಿನದ ಭಾಗದಂದು ಕಾರ್ಯಸಂಸ್ಥೆಯನ್ನು ಮುಚ್ಚಲಾಗಿದ್ದಿತೋ ಆ ಯಾವುದೇ ದಿನ ಅಥವಾ ದಿನದ ಯಾವುದೇ ಭಾಗದ ಸಲುವಾಗಿ ಅಥವಾ ರಜೆಯನ್ನು ಕೊಡಲಾಗಿದ್ದ ದಿನದ ಸಲುವಾಗಿ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ ಅಥವಾ ಅದನ್ನು ರದ್ದುಗೊಳಿಸತಕ್ಕದ್ದಲ್ಲ, ಮತ್ತು ಅಂಥ ವ್ಯಕ್ತಿಯು ಅಂಥ ದಿನದ ಅಥವಾ ದಿನದ ಯಾವುದೇ ಭಾಗದ ಬಗ್ಗೆ ಸಾಮಾನ್ಯವಾಗಿ ಮಜೂರಿಯನ್ನು ಪಡೆಯುವುದಿಲ್ಲವೆಂಬ ಆಧಾರದ ಮೇಲೆ ನಿಯೋಜಿತನಾಗಿದ್ದರೂ, ಆ ದಿನದಂದು ಅಥವಾ ದಿನದ ಯಾವುದೇ ಭಾಗದಂದು ಕಾರ್ಯ ಸಂಸ್ಥೆಯನ್ನು ಮುಚ್ಚಿರದಿದ್ದರೆ ಅಥವಾ ಆ ದಿನದಂದು ಅಥವಾ ಅ ದಿನದ ಯಾವುದೇ ಭಾಗದಂದು ರಜಾ ದಿನವನ್ನು ಕೊಟ್ಟಿರದಿದ್ದರೆ, ಅವನು ಯಾವ ಮಜೂರಿಯನ್ನು ಪಡೆಯುತ್ತಿದ್ದನೋ ಆ ಮಜೂರಿಯನ್ನು ಅವನಿಗೆ ಸಂದಾಯ ಮಾಡತಕ್ಕದ್ದು.

**7. ಪರಿಶೀಲಕರು.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ವ್ಯಕ್ತಿಗಳನ್ನು ಅಂಥ ಪ್ರತಿಯೊಬ್ಬ ವ್ಯಕ್ತಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪರಿಮಿತಿಯೊಳಗೆ ಪರಿಶೀಲರನ್ನಾಗಿ ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನೇಮಿಸಬಹುದು.

(2) ಈ ಪ್ರಕರಣದ ಮೇರೆಗೆ ನೇಮಿತನಾದ ಪ್ರತಿಯೊಬ್ಬ ಪರಿಶೀಲಕನನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

**8. ಪರಿಶೀಲಕರ ಅಧಿಕಾರಗಳು.–** (1) ರಾಜ್ಯ ಸರ್ಕಾರವು ಈ ಬಗ್ಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು ಯಾವ ಸ್ಥಳೀಯ ಪರಿಮಿತಿಗಳ ಬಗ್ಗೆ ತನ್ನನ್ನು ನೇಮಿಸಲಾಗಿದೆಯೋ ಆ ಸ್ಥಳೀಯ ಪರಿಮಿತಿಗಳೊಳಗೆ ಆ ಪರಿಶೀಲಕನು,–

(ಎ) ಈ ಅಧಿನಿಯಮವು ಅನ್ವಯಿಸುವ ಯಾವುದೇ ಕಾರ್ಯ ಸಂಸ್ಥೆಯೊಳಗೆ ತಾನು ಸೂಕ್ತವೆಂದು ಆಲೋಚಿಸುವಂಥ ಹಾಗೂ ಸರ್ಕಾರದ ನೌಕರರಾಗಿರುವಂಥ ಸಹಾಯಕರು ಯಾರಾದರೂ ಇದ್ದರೆ ಅವರೊಂದಿಗೆ ಪ್ರವೇಶಿಸಬಹುದು ಮತ್ತು ಅಲ್ಲಿ ಉಳಿಯಬಹುದು;

(ಬಿ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯವೆಂದು ತಾನು ಭಾವಿಸುಬಹುದಾದಂಥ ಯಾವುದೇ ಕಾರ್ಯ ಸಂಸ್ಥೆಯನ್ನು ಮತ್ತು 10ನೇ ಪ್ರಕರಣದ (2)ನೇ ಉಪಪ್ರಕರಣದ (c) ಖಂಡದ ಮೇರೆಗೆ ರಚಿಸಲಾದ ನಿಯಮಗಳಿಗನುಸಾರವಾಗಿ ಅಲ್ಲಿ ಇಟ್ಟುಕೊಂಡು ಬಂದಿರುವ ಯಾವುದೇ ದಾಖಲೆಯನ್ನು, ರಿಜಿಸ್ಟರ್‌ನ್ನು ಅಥವಾ ನೋಟೀಸನ್ನು ಪರೀಕ್ಷಿಸಬಹುದು ಮತ್ತು ಅಂಥ ಸಾಕ್ಷ್ಯವನ್ನು ಯಾವನೇ ವ್ಯಕ್ತಿಯಿಂದ ಆ ಸ್ಥಳದಲ್ಲಿಯೇ ಅಥವಾ ಅನ್ಯಥಾ ತೆಗೆದುಕೊಳ್ಳಬಹುದು;

(ಸಿ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ಅವಶ್ಯವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(2) 10ನೇ ಪ್ರಕರಣದ (2)ನೇ ಉಪಪ್ರಕರಣದ (c) ಖಂಡದ ಮೇರೆಗೆ ರಚಿಸಲಾದ ನಿಯಮಗಳಿಗನುಗುಣವಾಗಿ ಇಟ್ಟುಕೊಂಡು ಬಂದ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ನೋಟೀಸನ್ನು ವಶದಲ್ಲಿಟ್ಟುಕೊಂಡಿರುವ ಯಾವನೇ ವ್ಯಕ್ತಿಯು, ಅದನ್ನು ಹಾಜರುಪಡಿಸಬೇಕೆಂದು ಪರಿಶೀಲಕನು ಅಗತ್ಯಪಡಿಸಿದಾಗ, ಹಾಗೆ ಹಾಜರುಪಡಿಸಲು ಬದ್ಧನಾಗಿರತಕ್ಕದ್ದು; ಆದರೆ ಯಾವುದೇ ಪ್ರಶ್ನೆಗೆ ಆ ವ್ಯಕ್ತಿಯು ಉತ್ತರ ಕೊಟ್ಟರೆ ಅದು ಆ ವ್ಯಕ್ತಿಯನ್ನೇ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಪರಾಧಕ್ಕೆ ಸಿಕ್ಕಿಸಬಹುದಾದರೆ, ಅಂಥ ಪ್ರಶ್ನೆಗೆ ಉತ್ತರಿಸುವಂತೆ ಆ ಯಾವ ವ್ಯಕ್ತಿಯನ್ನೂ ಒತ್ತಾಯಿಸಿತಕ್ಕದ್ದಲ್ಲ.

**9. ದಂಡಗಳು.–** 3ನೇ ಪ್ರಕರಣದ, 4ನೇ ಪ್ರಕರಣದ ಉಪಬಂಧಗಳನ್ನು, 5ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯ ಮೂಲಕ ವಿಧಿಸಲಾದ ಅಗತ್ಯತೆಯನ್ನು, 6ನೇ ಪ್ರಕರಣವನ್ನು ಅಥವಾ 10ನೇ ಪ್ರಕರಣದ (2)ನೇ ಉಪಪ್ರಕರಣದ (c) ಖಂಡದ ಮೇರೆಗೆ ರಚಿಸಲಾದ ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅಂಥ ಉಲ್ಲಂಘನೆಯು ಯಾವ ಕಾರ್ಯ ಸಂಸ್ಥೆಯಲ್ಲಿ ನಡೆಯಿತೋ ಆ ಕಾರ್ಯ ಸಂಸ್ಥೆಯ ವ್ಯವಸ್ಥಾಪನೆಗೆ ಜವಾಬ್ದಾರನಾದ ಮಾಲೀಕನು ಅಥವಾ ಇತರ ವ್ಯಕ್ತಿಯು, ಪ್ರಥಮ ಅಪರಾಧದ ಸಂದರ್ಭದಲ್ಲಿ, ಇಪ್ಪತ್ತೈದು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**10. ನಿಯಮಗಳು.–** (1) ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯನ್ನು ಮುಂಚಿತವಾಗಿಯೇ ಪ್ರಕಟಿಸುವ ಷರತ್ತಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು.–

(ಎ) 4ನೇ ಮತ್ತು 5ನೇ ಪ್ರಕರಣಗಳ ಉದ್ದೇಶಗಳಿಗಾಗಿ ಗೋಪ್ಯನಾತೆಯಿಂದ ಅಥವಾ ವ್ಯವಸ್ಥಾಪನಾ ಸ್ಥಾನದಲ್ಲಿ ನಿಯೋಜಿತರಾದವರೆಂದು ಭಾವಿಸತಕ್ಕ ವ್ಯಕ್ತಿಗಳನ್ನು ನಿರ್ಧರಿಸಬಹುದು;

(ಬಿ) ಅವರ ಅಧಿಕಾರಗಳ ಚಲಾವಣೆಯನ್ನು ಹಾಗೂ ಕರ್ತವ್ಯಗಳ ನಿರ್ವಹಣೆಯನ್ನು ಪರಿಶೀಲಕರ ಮೂಲಕ ನಿಯಂತ್ರಿಸಬಹುದು.

(ಸಿ) ಈ ಅಧಿನಿಯಮವು ಅನ್ವಯಿಸುವ ಕಾರ್ಯಸಂಸ್ಥೆಗಳಲ್ಲಿ ರಿಜಿಸ್ಟರುಗಳನ್ನು ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರಬೇಕೆಂದು ಹಾಗೂ ನೋಟೀಸುಗಳನ್ನುಪ್ರದರ್ಶಿಸಬೇಕೆಂದು ಅಗತ್ಯಪಡಿಸಬಹುದು ಮತ್ತು ಅವುಗಳ ನಮೂನೆಯನ್ನು ಹಾಗೂ ಒಳಾಂಶಗಳನ್ನು ನಿಯಮಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕದ್ದು.

**11. ವಿನಾಯಿತಿ ಕೊಡುವ ಮತ್ತು ಅಮಾನತುಗೊಳಿಸುವ ಅಧಿಕಾರ.–** ತನ್ನ ನಿಯಂತ್ರಣಕ್ಕೊಳಪಟ್ಟಿರುವ ಕಾರ್ಯ ಸಂಸ್ಥೆಗಳಿಗೆ ಸಂಬಂಧಿಸಿ, ಕೇಂದ್ರ ಸರ್ಕಾರವು ಮತ್ತು ರಾಜ್ಯದೊಳಗಿರುವ ಇತರ ಎಲ್ಲಾ ಕಾರ್ಯಸಂಸ್ಥೆಗಳಿಗೆ ಸಂಬಂಧಿಸಿ ರಾಜ್ಯಸರ್ಕಾರವು, ವಿಧಿಸುವುದು ಸೂಕ್ತವೆಂದು ತಾನು ಆಲೋಚಿಸುವಂಥ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಈ ಅಧಿನಿಯಮವು ಅನ್ವಯಿಸುವ ಯಾವುದೇ ಕಾರ್ಯ ಸಂಸ್ಥೆಯನ್ನು ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ನಿರ್ದಿಷ್ಟ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು ಮತ್ತು ಯಾವುದೇ ಜಾತ್ರೆಗೆ ಅಥವಾ ಹಬ್ಬಕ್ಕೆ ಅಥವಾ ಸರ್ಕಾರಿ ರಜಾ ದಿನಗಳ ಸರಣಿಗೆ ಸಂಬಂಧಿಸಿದ ಯಾವುದೇ ವಿಶೇಷ ಸಂದರ್ಭದಲ್ಲಿ, ಈ ಅಧಿನಿಯಮದ ಪ್ರವರ್ತನೆಯನ್ನು ನಿರ್ದಿಷ್ಟ ಅವಧಿಯವರೆಗೆ ಅಮಾನತುಗೊಳಿಸಬಹುದು.